(*g*) Katenahally tank and Anupanakunte minor tank are proposed under Rs. 15.00 crores programme that is under consideration. Kambadarangegowdanakatte is already approved.

ಶ್ರೀ ಟಿ. ತಾರೇಗೌಡ.—ಗುಬ್ಬಿ ತಾಲ್ಲೂಕು ಚೇಲೂರು ಹೋಬಳಿಯಲ್ಲಿ ಬರಗಾಲ ಬಂದು ಕುಡಿಯುವುದಕ್ಕೆ ನೀರು ಇಲ್ಲ ಎನ್ನುವುದನ್ನು ತಾವು ಒಪ್ಪಿಕೊಂಡು ಅಂಕನೆಂದ್ರದ ಕಂಬದ ರಂಗೇಗೌಡನ ಕಟ್ಟೆಗೆ 200 ಲಕ್ಷ ರೂಪಾಯಿಗಳಿಗೆ ಮಂಜೂರಾತಿಯನ್ನು ಕೊಟ್ಟಿದೆ ಎಂದು ತಿಳಿಸಿದ್ದೀರಿ. ಇದನ್ನು ಇನ್ನೊಂದು ಸಾರಿ ಪರಿಶೀಲನೆ ಮಾಡಿ ಸರಿಯಾಗಿ ಎಷ್ಟು ಎಂಬುದನ್ನು ಹೇಳುತ್ತೀರಾ ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕಂಬದ ರಂಗೇಗೌಡನ ಕಟ್ಟೆಗೆ 200 ಲಕ್ಷ ರೂಪಾಯಿ ಅಂದಾಜು ಒಪ್ಪಿಲ್ಲ. 200 ಲಕ್ಷ ರೂಪಾಯಿಗಳ ಪ್ರೊಗ್ರಾಮಿನಲ್ಲಿ ಒಪ್ಪಿದೆ. The work is included in the Rs. 200 lakhs programme is approved.

ಶ್ರೀ ಟಿ. ತಾರೇಗೌಡ.—ಕಂಬದ ರಂಗೇಗೌಡನ ಕಟ್ಟೆಗೆ ಎಷ್ಟು ಲಕ್ಷ ರೂಪಾಯಿ ಅಂದಾಜು ಮಾಡಿದೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇದಕ್ಕೆ ಅಂದಾಜು ತಯಾರು ಮಾಡಿರುವುದು 87,500 ರೂಪಾಯಿಗಳು ಇದರಿಂದ 25 ಎಕರೆ ಸೆಮಿ ಡ್ರೈ ಅಚ್ಚುಕಟ್ಟು ಆಗುತ್ತದೆ.

ಶ್ರೀ ಟಿ. ತಾರೇಗೌಡ.—ಹೋದ ಚುನಾವಣೆ ಕಾಲದಲ್ಲಿ ಅಚ್ಚುಕಟ್ಟು ಕಡೆ ರೈತರು ಇದುವರಗೂ ಕೆಲಸ ಶುರುವಾಗಿಲ್ಲ, ಕೂಲಿ ಸಿಕ್ಕುತ್ತಾ ಇಲ್ಲ ಎಂದು ಪದೇ ಪದೇ ಹೇಳುತ್ತಿರುವುದರಿಂದ ಕೂಡಲೇ ಕೆಲಸ ಪ್ರಾರಂಭ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆ ಪ್ರದೇಶ ಯಾವಾಗಲೂ ಬರಗಾಲ ಪ್ರದೇಶವಾದುದರಿಂದ ಅಲ್ಲಿ ಟ್ಯಾಂಕಿಗೆ ಮಂಜೂರಾತಿಯನ್ನು ನೀಡಿದೆ. ಕ್ಯಾತೇನಹಳ್ಳಿ ಟ್ಯಾಂಕ್‌ಗೆ ಹಿಂದು ಕಾಲು ಲಕ್ಷ ರೂಪಾಯಿಗಳ ಅಂದಾಜು ತಯಾರು ಮಾಡಿದೆ. ಇದರಿಂದ 65 ಎಕರೆ ಅಚ್ಚುಕಟ್ಟಾಗುತ್ತದೆ. ಈ ಕೆಲಸ 15 ಕೋಟಿ ರೂಪಾಯಿಗಳ ಪ್ರೊಗ್ರಾಮಿನಲ್ಲಿ ಸೇರಿದೆ. ಆಮೇಲೆ ಅನುಪನಕುಂಟೆ ಮೈನರ್ ಇರಿಗೇಷನ್ ಟ್ಯಾಂಕನ್ನು 1.82 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಅಂದಾಜು ತಯಾರು ಮಾಡಿದೆ. ಇದು ಕೂಡ 15 ಕೋಟಿ ರೂಪಾಯಿಗಳ ಪ್ರೊಗ್ರಾಮಿನಲ್ಲಿ ಸೇರಿದೆ. ಇದರಿಂದ 90 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ಅನುಕೂಲವಾಗುತ್ತದೆ. ದೇವನಹಳ್ಳಿ ಕೆರೆಗೆ ಅಂದಾಜು ಆಗಿದೆ. ಇದನ್ನು ಹಣದ ಕೊರತೆಯಿಂದ 15 ಕೋಟಿ ರೂಪಾಯಿಗಳ ಪ್ರೊಗ್ರಾಮಿನಲ್ಲಿ ಸೇರಿಸಲಿಕ್ಕೆ ಆಗಿಲ್ಲ.

Vijayanagar Steel Plant

145. SRI S. M. SHEERNALY CHANDRASEKHAR (Hosanagar).—Will the Minister for Industries and Parliamentary Affairs be pleased to state:—

(*a*) whether a foundation stone was laid by Prime Minister for Vijayanagar Steel Plant during 1969-70 ;

(*b*) the progess made towards its construction since then ;

(*c*) the amount allotted by the Government of India to this plant;

(*d*) whether the work of the plant has co nmenced ;

(*e*) if so? when it is expected to be completed ?

SRI S. M. KRISHNA (Minister for Industries and Parliamentary Affairs).—

(*a*) Yes.

(*b*) About 7400 acres of lands have been acquired for the Steel plant. The Detailed Project Report for this Steel plant was Commissioned on 2nd April 1975. The report is under preparation by the consultants and is expected to be shortly. Land Survey and raw materials testing are in progress. Planning for infrastructure facilities is also in progress.

(*c*) The details of expenditure incurred on the project are as under :

(i) Expenditure upto previous year	...	Rs. 2.2 crores
(ii) Revised budget for current year	...	Rs. 0.7 crore

(*d*) No.

(*e*) Does not arise.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಈ ವಿಜಯನಗರ ಸ್ಟೀಲ್ ಪ್ಲಾಂಟಿಗೆ ಒಟ್ಟು ಖರ್ಚು ಮಾಡಬೇಕಾಗಿರುವ ಮೊಬಲಗು ಎಷ್ಟು ಸ್ವಾಮಿ ?

† ಶ್ರೀ ಎಸ್. ಎಂ. ಕೃಷ್ಣ.—1500 ಕೋಟಿ ರೂಪಾಯಿಗಳು.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಈ 9 ವರ್ಷಗಳಲ್ಲಿ 2.2 ಕೋಟಿ ರೂಪಾಯಿಗಳು ವೆಚ್ಚವಾಗಿದೆ ಎಂದು ಹೇಳಿದ್ದೀರಿ. ಅಂದರೆ 1500 ಕೋಟಿ ರೂಪಾಯಿ ಖರ್ಚು ಮಾಡಿ ಈ ಒಂದು ಬೃಹತ್ ಯೋಜನೆಯನ್ನು ಪೂರ್ಣ ಮಾಡಲಿಕ್ಕೆ ಎಷ್ಟು ಶತಮಾನ ಹಿಡಿಯುತ್ತದೆ ಸ್ವಾಮಿ?

ಶ್ರೀ ಎಸ್. ಎಂ. ಕೃಷ್ಣ.—ಈಗಿನ ಪ್ರಮಾಣದಲ್ಲಿ ಹೋದರೆ ಹೊಸದಾಗಿ ಲೆಕ್ಕ ಹಾಕ ಬೇಕಾಗುತ್ತದೆ ನಿರ್ದಿಷ್ಟವಾಗಿ ಇಷ್ಟೇ ವರ್ಷಗಳಲ್ಲಿ ಈ ಯೋಜನೆ ಮುಗಿಯುತ್ತದೆ ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಏನಾದರೂ ಇದುವರೆಗೆ ಸಹಾಯ ಧನ ಬಂದಿದೆಯೇ ? ಇದರ ಬಗ್ಗೆ ಅವರೇನಾದರೂ ಅಸಹಕಾರ ತೋರಿಸಿದ್ದಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಇದು ಕೇಂದ್ರ ಸರ್ಕಾರದಿಂದ ಸಹಾಯ ಧನ ಬರತಕ್ಕ ಪ್ರಶ್ನೆಯಲ್ಲ. ಇದು ಕೇಂದ್ರ ಸರ್ಕಾರದ ಪ್ರಾಜೆಕ್ಟ್. ಕೇಂದ್ರ ಸರ್ಕಾರ ಸ್ಥಾಪನೆ ಮಾಡಿರತಕ್ಕಂಥ ಉಕ್ಕಿನ ಕಾರ್ಖಾನೆ. ಆದ್ದರಿಂದ ಸಹಾಯ ಧನದ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನನ್ನ ಪ್ರಶ್ನೆಗೆ 3 ವರ್ಷಗಳಿಂದ ಒಂದೇ ಸಮನಾದ ಉತ್ತರ ಕೊಡುತ್ತಿದ್ದಾರೆ. ಈ ವಿಜಯನಗರ ಸ್ಟೀಲ್ ಪ್ಲಾಂಟಿಗೆ 1500 ಕೋಟಿ ರೂಪಾಯಿಗಳಾಗುತ್ತವೆ ಎಂದು ಹೇಳುತಿದ್ದಾರೆ. ಈಗ ನಮ್ಮಲ್ಲಿ ವಿಜಯನಗರ ಸ್ಟೀಲ್ ಪ್ಲಾಂಟ್, ಸೇಲಂ ಸ್ಟೀಲ್ ಪ್ಲಾಂಟ್, ವಿಶಾಖ ಪಟ್ಟ ಸ್ಟೀಲ್ ಪ್ಲಾಂಟ್ ಎಂದು 3 ಸ್ಟೀಲ್ ಪ್ಲಾಂಟ್‌ಗಳಿವೆ. ಇವುಗಳನ್ನು ಸದ್ಯಕ್ಕೆ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಪ್ರಾಜೆಕ್ಟ್ ರಿಪೋರ್ಟ್ ಮಾಡಿದ್ದಾರೆ ಈಗಲಾದರೂ ಕೇಂದ್ರ ಸರ್ಕಾರದವರು ಇದನ್ನು ಕಾರ್ಯಗತಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ, ಕೇಂದ್ರ ಸರ್ಕಾರದ ಖಚಿತವಾದ ನಿಲುವು ಏನು ಸ್ವಾಮಿ ?

ಶ್ರೀ ಎಸ್. ಎಂ. ಕೃಷ್ಣ.—ಈ ಸದನದಲ್ಲಿ ಹಿಂದೆ ಉತ್ತರ ಕೊಡುತ್ತಾ, ವಿಜಯನಗರ ಉಕ್ಕಿನ ಕಾರ್ಖಾನೆಯ ಡಿಟೆಲ್ಡ್ ಪ್ರಾಜೆಕ್ಟ್ ರಿಪೋರ್ಟ್‌ನ್ನು ಮಾಡುತ್ತಿದ್ದಾರೆ ಎಂದು ಹೇಳಿದೆ. ಇಷ್ಟು ದೊಡ್ಡ ಪ್ರಮಾಣದ ಉಕ್ಕಿನ ಘಟಕದ ಡಿಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್‌ಗೆ ಕನಿಷ್ಠ ಪಕ್ಷ 18 ತಿಂಗಳು

ಬೇಕಾಗಿದೆ. ಈಗ ನನಗೆ ಬಂದಿರುವ ವರ್ತಮಾನದ ಪ್ರಕಾರ ಡಿಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್ ಇನ್ನು ಒಂದು ತಿಂಗಳಿಗೆ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದವರ ಕೈಗೆ ಸೇರುತ್ತದೆ ಎಂದು ವರ್ತಮಾನ ಬಂದಿದೆ.

ಶ್ರೀ ವಿ. ಎನ್. ಪಾಟೀಲ್.—ಈಗ ಕೇಂದ್ರ ಸರ್ಕಾರ ಬದಲಾಯಿಸಿದೆ. ಹೊಸ ಸ್ಟೀಲ್ ಮಂತ್ರಿಗಳ ಜೊತೆಯಲ್ಲಿ ಸಂಧಾನ ನಡೆಸಿದ್ದೀರಾ, ಅದರ ಪ್ರತಿಕ್ರಿಯೆ ಏನು ಸ್ವಾಮಿ ?

ಶ್ರಿ ಎಸ್. ಎಂ. ಕೃಷ್ಣ —ನಾನು 9ನೇ ತಾರೀಖು ಹೊಸ ಉಕ್ಕಿನ ಮಂತ್ರಿಗಳನ್ನು ನೋಡಲಿಕ್ಕೆ ಹೋಗುವವನಿದ್ದೇನೆ. ವಿಜಯನಗರ ಸ್ಟೀಲ್ ಪ್ಲಾಂಟಿನ ಕಾರ್ಯ ಈಗಾಗಲೇ ಹೇಳಲಾಗದಷ್ಟು ವಿಳಂಬವಾಗಿದೆ, ಇನ್ನು ಒಂದು ತಿಂಗಳಲ್ಲಿ ಡಿಟೇಲ್ಡ್ ಪ್ರಾಜೆಕ್ಟ್ ರಿಪೋರ್ಟ್ ಆಗುವುದರಿಂದ ಇದರ ಕೆಪಾಸಿಟಿ ಏನು ಎನ್ನುವುದರ ಬಗ್ಗೆ ತೀರ್ಮಾನ ತಗೆದುಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ, ಇದಕ್ಕೆ ಅವ್ಯತೆ ಕೊಡಬೇಕು ಎಂದು ನಾನು ಕೇಂದ್ರ ಸರ್ಕಾರವನ್ನು ಪ್ರಾರ್ಥನೆ ಮಾಡುವುದಕ್ಕೆ ಹೋಗುತ್ತಿದ್ದೇನೆ.

ಶ್ರೀ ಬಿ. ಬೈರಪ್ಪಾಜಿ —ವಿಜಯನಗರ ಉಕ್ಕಿನ ಕಾರ್ಖಾನೆಯ ಸ್ಥಾಪನೆಗಾಗಿ ಎಷ್ಟು ಸಾವಿರ ಎಕರೆ ಜಮೀನನ್ನು ವಶಪಡಿಸಿಕೊಂಡಿದ್ದೀರಿ, ಯಾವಾಗ ವಶಪಡಿಸಿಕೊಂಡಿದ್ದೀರಿ. ಇದಕ್ಕಾಗಿ ಕೊಟ್ಟಿರತಕ್ಕ ಪರಿಹಾರ ಎಷ್ಟು ? ರೈತರು ಜಮೀನು ಕಳೆದುಕೊಂಡಿದ್ದಾರೆ ಅವರಿಗೆ ಬರತಕ್ಕ ಆದಾಯ ಹೋಯಿತು. ರೈತರಿಗೆ ಜಮೀನು ಹೋಯಿತು, ಕಾರ್ಖಾನೆ ಬರಲಿಲ್ಲ. ದಯವಿಟ್ಟು ಇದಕ್ಕೆ ಉತ್ತರ ಕೊಡುತ್ತೀರಾ ಸ್ವಾಮಿ ?

ಶ್ರೀ ಎಸ್. ಎಂ. ಕೃಷ್ಣ.—ಈಗಾಗಲೇ ಸುಮಾರು 7400 ಎಕರೆ ಜಮೀನನ್ನು ನಾವು ಅಕ್ವೈರ್ ಮಾಡಿಕೊಂಡಿದ್ದೇವೆ. ಮತ್ತು ಅದಕ್ಕೆ ಪರಿಹಾರ ಧನ ಕೂಡ ಕೊಟ್ಟಿದ್ದೇವೆ. ರೈತರಿಗೆ ಭೂಮಿ ಹೋಯಿತು, ಕಾರ್ಖಾನೆ ಬರಲಿಲ್ಲ ನಿಜ. ಆದರೆ ಪರಿಹಾರ ಧನ ಕೊಟ್ಟಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ವಿಜಯನಗರ ಸ್ಟೀಲ್ ಪ್ಲಾಂಟ್ ನಿಧಾನವಾಗಿರುವುದಕ್ಕೆ ಹಣದ ಅಭಾವ ಕಾರಣ ಎಂದು ಕೇಳಿದ್ದೇನೆ. ಪರದೇಶದ ಸಹಾಯ ತೆಗೆದುಕೊಂಡು ಈ ಸ್ಟೀಲ್ ಪ್ಲಾಂಟನ್ನು ಆದಷ್ಟು ಬೇಗ ಪ್ರಾರಂಭಿಸುವುದಕ್ಕೆ ಕೇಂದ್ರದ ಜೊತೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ – ಅದು ಒಂದು ವಿಧಾನ. ಈಗ ನಮ್ಮಲ್ಲಿಗಳ ಅಭಾವದಿಂದ ದಕ್ಷಿಣದ ರಾಜ್ಯಗಳಲ್ಲಿ ಸ್ಥಾಪನೆಯಾಗಬೇಕಾಗಿರತಕ್ಕಂಥ ಈ 3 ಕಾರ್ಖಾನೆಗಳಿಗೆ ಎಷ್ಟು ಆದ್ಯತೆ ಕೊಡಬೇಕೋ ಅಷ್ಟು ಕೊಡುವುದಕ್ಕೆ ಸಾಧ್ಯವಾಗಿಲ್ಲ ಎನ್ನುವುದು ಒಂದು. ಕಬ್ಬಿಣ ಮತ್ತು ಉಕ್ಕಿಗೆ ಈ ದೇಶದಲ್ಲಿ ಡಿಮ್ಯಾಂಡ್ ಸಾಕಾದಷ್ಟು ಪ್ರಮಾಣದಲ್ಲಿ ಇಲ್ಲ ಎನ್ನುವುದು ಒಂದು. ಈ 2--3 ಕಾರಣಗಳಿಂದ ಸ್ವಲ್ಪ ನಿಧಾನವಾಗುತ್ತಾ ಇದೆ. ಕೇಂದ್ರದಲ್ಲಿ ಈಗಾಗಲೇ ರಚನೆಯಾಗಿರುವ ಜನತಾ ಸರ್ಕಾರದ ನೀತಿ ಇದರ ಬಗ್ಗೆ ಏನೆಂಬುದನ್ನು ಸ್ಪಷ್ಟಪಡಿಸಿಲ್ಲ. ಹೊರದೇಶಗಳಿಂದ ಉಕ್ಕಿನ ಕಾರ್ಖಾನೆಗೆ ಸಹಾಯ, ಅವರ ಕ್ಯಾಪಿಟಲ್ ಈ ದೇಶಕ್ಕೆ ಬಂದು ಈ ಕಾರ್ಖಾನೆಯನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಏನು ಯೋಜನೆ ಮಾಡಿದ್ದಾರೋ ಗೊತ್ತಿಲ್ಲ. ನಾನು ಅಲ್ಲಿಗೆ ಹೋದಾಗ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಇದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಕೆ. ಎಚ್ ಹನುಮೇಗೌಡ.—ಇದು ಹಿಂದಿನ ಪ್ರಧಾನ ಮಂತ್ರಿಗಳ ಆಸ್ಥಿಭಾರ ಹಾಕಿದ ಯೋಜನೆ. ಹಿಂದಿನ ಸರ್ಕಾರ ಇರುವಾಗಲೇ ಇದು ಬಹಳಷ್ಟು ವಿಳಂಬವಾಗಿದೆ. ಈಗ ಕೇಂದ್ರ ಸರ್ಕಾರ ಬದಲಾದ ಪರಿಸ್ಥಿತಿಯೊಳಗೆ ಅವರಿಂದ ತಾವು ಎಷ್ಟರ ಮಟ್ಟಿನ ಸಹಾಯ ನಿರೀಕ್ಷಿಸಿ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಹಿಂದಿನ ಪ್ರಧಾನ ಮಂತ್ರಿಗಳು ಈ ಪ್ರಾಜೆಕ್ಟ್‌ಗೆ ಆಸ್ಥಿಭಾರ ಹಾಕಿದರು ಅದೀಗ ಈಗಿನ ಪ್ರಧಾನ ಮಂತ್ರಿಗಳ ಆಶೀರ್ವಾದದಿಂದ ಮುಂದುವರಿಯುತ್ತದೆಂದು ನನ್ನ ನಿರೀಕ್ಷೆ.